SRI R. ROSHAN BAIG :- A proposal has come from the police Department to the Government to include the same in 1996-97 Budget. The propasal is dated 30-5-1996. ಆದಷ್ಟು ಬೇಗನೆ ಕಾರ್ಯಕ್ರಮವನ್ನು ಶುರು ಮಾಡುತ್ತೇವೆ.

ಶ್ರೀ ಯು. ಆರ್. ಸಭಾಪತಿ :- ತೆರವು ಮಾಡಬೇಕೆಂದು ಕೋರ್ಟ್ ಆದೇಶ ಇರುವುದು ತಮ್ಮ ಗಮನಕ್ಕೆ ಬಂದಿದೆ. ಕೋರ್ಟ್ ಆದೇಶ ಇದ್ದರೂ ತಾವು ಕಟ್ಟಡ ತೆರವು ಮಾಡದಿದ್ದರೆ ಮಾಲೀಕರಿಗೆ ಹೇಗೆ ನ್ಯಾಯ ಒದಗಿಸುತ್ತೀರಿ?

ಶ್ರೀ ರೋಷನ್ ಬೇಗ್ :- ಹಣ ರಿಲೀಸ್ ಆಗಿದೆ. ಆದಷ್ಟು ಬೇಗ ಕೆಲಸವನ್ನು ಶುರು ಮಾಡುತ್ತೇವೆ.

ವಿಷಯ :- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಹಂಚಿಕೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 255 (411)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :- ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನ ರಹಿತರು ನಿವೇಶನ ಗಳಿಗಾಗಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು?

2) ಈ ಅರ್ಜಿಗಳಿಂದ ಬಿ.ಡಿ.ಎ. ಗೆ ಸಂದಾಯವಾಗಿರುವ ಶುಲ್ಕ ಹಾಗೂ ಠೇವಣಿ ಹಣದ ವಿವರಗಳನ್ನು ಒದಗಿಸುವುದು.

3) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅರ್ಜಿದಾರರಿಗೆ ನಿವೇಶನಗಳನ್ನು ಹಂಚಲು ಹೊಸದಾಗಿ ಬಡಾವಣೆಗಳನ್ನು ನಿರ್ಮಾಣ ಮಾಡುತ್ತಿದೆಯೇ?

ಶ್ರೀ ಅನಂತ್ ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :-

ಅ) ಒಟ್ಟು 86, 988 ಮಂದಿ ನಿವೇಶನಗಳ ಹಂಚಿಕೆಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಆ) ರೂ. 34,11,46,000-00 ಗಳನ್ನು ಠೇವಣಿ ರೂಪದಲ್ಲಿ ಸ್ವೀಕರಿಸಲಾಗಿದೆ.

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಜಮೀನು ಲಭ್ಯವಿರುವ ಕಡೆ ಸ್ವಾಧೀನ ಪಡಿಸಿಕೊಂಡು ಮತ್ತು ಅದರ ಯೋಜನೆಯಂತೆ ಹೊಸ ಬಡಾವಣೆಗಳನ್ನು ರಚಿಸಲು ಕ್ರಮ ಕೈಗೊಂಡಿರುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಇದೊಂದು ದುರಂತ ಕಣ್ಣೀರಿನ ಕಥೆ. ಒಟ್ಟು 86,988 ಜನರಿಗೆ ಹತ್ತು ವರ್ಷದ ಹಿಂದೆ ನಿವೇಶನ ರಹಿತರಿಗೆ ನಿವೇಶನ ಕೊಡುತ್ತೇವೆಂದು ಹೇಳಿದ್ದರು. ನಮಗೆ ನಿವೇಶನ ಕೊಡಿ ಎಂದು ಅವರು ತೇವಣಿಯನ್ನು ಮಾಡಿಲ್ಲ. ಇವರೇ ಅರ್ಜಿಯನ್ನು ಕರೆದಾಗ ಅವರೆಲ್ಲಾ ನಿವೇಶನಕ್ಕಾಗಿ ಅರ್ಜಿಯನ್ನು ಹಾಕಿ ಒಟ್ಟು 34,11,46,000 ರೂಪಾಯಿಗಳ ತೇವಣಿಯನ್ನು ಇಟ್ಟಿದ್ದಾರೆ. ಈ ಹಣವನ್ನು ತಾವು ಎಲ್ಲಿಟ್ಟಿದ್ದೀರಿ? ಹಾಗೆ ಹಣ ಕಟ್ಟಿರತಕ್ಕಂಥ ನಿವೇಶನ ರಹಿತರಿಗೆ, ತೇವಣಿದಾರರಿಗೆ ಇದುವರೆಗೆ ನೀವು ಬಡ್ಡಿ ಕೊಟ್ಟಿದ್ದೀರಾ? ಕೊಡದೇ ಇದ್ದರೆ ಅವರಿಗೆ ನೀವು ನಿವೇಶನವನ್ನು ಯಾವಾಗ ಕೊಡುತ್ತೀರಿ? ಬಡ್ಡಿ ಕೊಡದೇ ಇರತಕ್ಕಂಥದ್ದು ಮೋಸ. ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದವರಿಗೆ ಇದುವರೆಗೆ ಬಡ್ಡಿಯೂ ಇಲ್ಲ, ನಿವೇಶನವೂ ಇಲ್ಲ, ಆ ಹಣ ನೀವು ಎಲ್ಲಿಯಾದರೂ ಇಟ್ಟಿದ್ದರೆ ಅದಕ್ಕೆ ಬಡ್ಡಿಯಾದರೂ ಸಿಗುತ್ತಿತ್ತು. ಅವರಿಗೆ ಏನೂ ಕೊಡದಿರುವುದು ಇದೊಂದು ತರಹ ಚೀಟಿಂಗ್....

ಅಧ್ಯಕ್ಷರು :- ನೀವು ಚೀಟಿಂಗ್ ಎಂದು ಹೇಳಿರುವುದು ಕೂಡ ಚೀಟಿಂಗ್...

ಶ್ರೀ ವಾಟಾಳ್ ನಾಗರಾಜ್ :- ಹೌದು. ನಾವು ಕೆಲವೊಂದು ವಿಚಾರಗಳಲ್ಲಿ ಜನ ಆಡುವ ಭಾಷೆ ಯಾವುದು ಇದೆ ಅದನ್ನು ಸ್ವಲ್ಪ ಉಪಯೋಗಿಸಬೇಕಾಗುತ್ತದೆ. ಉದಾಹರಣೆಗೆ ಬೂಟ್ಸ್ ಇದೆ ಅದಕ್ಕೆ ನಾವು ಕನ್ನಡದಲ್ಲಿ ಹೇಳುವುದಕ್ಕೆ ಹೊರಟರೆ ಬಹಳ ಕಷ್ಟವಾಗುತ್ತದೆ. ಅದನ್ನೆಲ್ಲಾ ನಾವು ಗಮನದಲ್ಲಿಟ್ಟುಕೊಂಡು ಮಾತನಾಡಬೇಕಾಗುತ್ತದೆ. ಹಾಗೆಯೇ ಪೋಲಿಸ್ ಕೂಡ ಆಡು ಭಾಷೆಯಾಗಿದೆ, ಅದರ ಬಗ್ಗೆ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ತಾವು ಈ 86,988 ಜನ ಏನು ಇದ್ದಾರೆ ಅವರಿಗೆ ತಾವು ಸ್ಪಷ್ಟವಾಗಿ, ನಿಖರವಾಗಿ ಹೇಳಬೇಕಾಗುತ್ತದೆ ಇದುವರೆಗೆ ಆಗಿರತಕ್ಕಂಥ ಬಡ್ಡಿ ಎಷ್ಟೆಂದು. ಒಂದು ವೇಳೆ ನೀವು ಇದೇ ಹಣವನ್ನು ಬೇರೆ ಕಡೆ ಇಟ್ಟಿದ್ದರೆ ಅದಕ್ಕೆ ಬಡ್ಡಿಯಾದರೂ ಸಿಗುತ್ತಿತ್ತು, ಆದರಿಂದ ನಿವೇಶನಗಳನ್ನು ಖರೀದಿ ಮಾಡಿ ತೇವಣಿ ದಾರರಿಗೆ ಕೊಡಲು ಅಭಿವೃದ್ಧಿ ಪ್ರಾಧಿಕಾರದವರಿಗೆ ಅನುಕೂಲವಾಗುತ್ತಿತ್ತು.

ಶ್ರೀ ಅನಂತ್ ನಾಗ್ :- ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ತಮಗೆ ಗೊತ್ತಿರುವ ಹಾಗೆ ಎಲ್ಲವೂ ಸರಿಯಲ್ಲ. ಆದರೆ ಈಗ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು ಬಡ್ಡಿಯ ಬಗ್ಗೆ ಅದನ್ನು ಕೊಡುತ್ತೇವೆಂದು ಅವರು ಕಮಿಟ್‌ಮೆಂಟ್ ಮಾಡಿರಲಿಲ್ಲ. ಹಾಗೆಯೇ ಮಾನ್ಯ ಸದಸ್ಯರು ಈ ಹಣವನ್ನು ಬೇರೆ ಕಡೆಗೆ ಇಟ್ಟರೆ ಬಡ್ಡಿ ಸಿಗುತ್ತದೆಂದು ಹೇಳಿದರು. ಖಂಡಿತವಾಗಿ ಬಡ್ಡಿ ಸಿಗುತ್ತಿತ್ತು, ಆದರೆ ಪ್ರಧಿಕಾರಕ್ಕೆ ಜಮೀನು ಸಿಗುತ್ತದೆ, ಜಮೀನು ಸಿಗುವ ಕಡೆ ಸ್ವಾಧೀನ ಪಡಿಸಿಕೊಂಡು ಬಡಾವಣೆಗಳನ್ನು ರಚಿಸಿ ನಿವೇಶನಗಳನ್ನು ಹಂಚುವ ಉದ್ದೇಶದಿಂದಲೇ ಅವರಿಂದ ಮನವಿಗಳನ್ನು ಸ್ವೀಕರಿಸಲಾಗಿತ್ತು. ಹಾಗೂ 34,11,46,000 ರೂಪಾಯಿಗಳನ್ನು ತೇವಣಿ ರೂಪದಲ್ಲಿ ಸ್ವೀಕರಿಸಲಾಗಿದೆ. ಅದಕ್ಕೆ ಬಡ್ಡಿ ಕೊಡುತ್ತಿಲ್ಲ, ಹಾಗೂ ಅದರ ಬಗ್ಗೆ ಕಮಿಟ್‌ಮೆಂಟ್ ಕೂಡ ಮಾಡಿರಲಿಲ್ಲ. ಇದರ ಬಗ್ಗೆ ಅನೇಕ ಕಡೆ ಕೋರ್ಟು ಕಛೇರಿಗೆ ಹೋಗಿರುವುದು ಕೂಡ ಇದೆ. ಅದಕಾರಣ ಸರ್ಕಾರಿ ಆದೇಶದ ಬಗ್ಗೆ

ಕಾಯಕಲ್ಪವಾಗಬೇಕಾಗಿದೆ. ನಾವು ಎಲ್ಲಿ ಸೈಟ್‌ಗಳನ್ನು ಕೊಡುವುದಕ್ಕಾಗುವುದಿಲ್ಲ ಅಲ್ಲಿ ಹಣವನ್ನು ಮಾಪಸ್ಸು ಪಡೆದುಕೊಳ್ಳಲು ತಿಳಿಸಿದ್ದೇವೆ. ಆದಷ್ಟು ಬೇಗ ಇದರ ಬಗ್ಗೆ ಒಂದು ಕಾಯಕಲ್ಪ ಮಾಡಿ, ಈ ಜನರಿಗೆ ಸೈಟ್‌ಗಳನ್ನು ಕೊಡುವಲ್ಲಿ ಅಥವಾ ಹಣವನ್ನು ಮಾಪಸ್ಸು ಕೊಡುವಲ್ಲಿ ವ್ಯವಸ್ಥೆ ಮಾಡುತ್ತೇವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಮೂಲಾಗ್ರವಾಗಿ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ ಎನ್ನತಕ್ಕಂಥದ್ದನ್ನು ಸನ್ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಪ್ರಾಮಾಣಿಕವಾಗಿ ಎಂದು ತಾವು ಉತ್ತರ ಕೊಟ್ಟರೆ ಆಗುವುದಿಲ್ಲ. ಹತ್ತು ವರ್ಷಗಳ ಹಿಂದೆ ಅವರು ದುಡ್ಡು ಕೊಟ್ಟಿದ್ದಾರೆ. ಇದರಲ್ಲಿ ಪ್ರಾಮಾಣಿಕ, ಅಪ್ರಾಮಾಣಿಕ ಪ್ರಶ್ನೆ ಇಲ್ಲ. ನೇರವಾಗಿ ಹಣ ವಸೂಲು ಮಾಡಿಕೊಂಡಿರತಕ್ಕಂಥದ್ದಕ್ಕೆ ನಿವೇಶನ ಸೈಟು ಕೊಡುತ್ತೀರೋ ಎನ್ನತಕ್ಕಂಥದ್ದರ ಬಗ್ಗೆ ಹೇಳಿ. ಇಲ್ಲವೆಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿವೇಶನ ಹಂಚುವುದಕ್ಕೆ ಆಗುವುದಿಲ್ಲವೆಂದರೆ ಮುಚ್ಚಿಹಾಕಿ. ಅದು ಏತಕ್ಕೆ ಇರಬೇಕು? ಕೊಡುವಂತಿರಬೇಕು, ಅದನ್ನೇ ಮಾಡಲಿಲ್ಲವೆಂದರೆ ಏತಕ್ಕೆ ಬೇಕು? ದುಡ್ಡು ಕೊಡುತ್ತೀರೋ, ಬಡ್ಡಿ ಕೊಡುತ್ತಿರೋ, ನಿವೇಶನ ಕೊಡುತ್ತಿರೋ ಎಂದು ನಿಖರವಾಗಿ ಹೇಳಿ. ಕೆಲವೊಂದು ಫ್ಲ್ಯಾಟ್‌ಗಳ ವ್ಯವಸ್ಥೆಯನ್ನು ಮಾಡಿದ್ದೀರಿ, ಆವಾಗ ಮನೆಗಳಿಗೆ 2.15 ಲಕ್ಷ ರೂಪಾಯಿಗಳನ್ನು ಕಟ್ಟಬೇಕೆಂದು ಹೇಳಿದ್ದೀರಿ, ಈಗ ಮತ್ತೆ 1.65 ಲಕ್ಷ ರೂಪಾಯಿ ಹೆಚ್ಚು ಹಣವನ್ನು ಕೊಡಬೇಕೆಂದು ಅವರಿಗೆ ಹೇಳುತ್ತಿದ್ದೀರಿ. ಅವರು ಆಗಲೇ ಸಾಲ ಸೋಲ ಮಾಡಿ ಕಷ್ಟಪಟ್ಟು ದುಡ್ಡನ್ನು ತುಂಬಿರುತ್ತಾರೆ. ಮತ್ತೆ ಈಗ ಹೆಚ್ಚು ಹಣ ಕಟ್ಟಿ ಎಂದರೆ ಎಲ್ಲಿಂದ ಕಟ್ಟಬೇಕು? ಆಗಲೇ ನೀವು ಇಷ್ಟು ಕಟ್ಟಬೇಕೆಂದು ಹೇಳಿದರೆ ಉಳಿಸಿ ಕೊಳ್ಳುವರರು ಉಳಿಸಿಕೊಳ್ಳುತ್ತಿದ್ದರು. ಉಳಿದವರು ರದ್ದು ಮಾಡುತ್ತಿದ್ದರು.

ಶ್ರೀ ಅನಂತ್ ನಾಗ್ :- ಮಾನ್ಯ ಅಧ್ಯಕ್ಷರೇ, ಫ್ಲ್ಯಾಟ್‌ಗಳ ವಿಚಾರವಾಗಿ ಮಾನ್ಯ ಸದಸ್ಯರು ಪ್ರಸ್ತಾಪವನ್ನು ಮಾಡಿದ್ದಾರೆ. ಇದರ ಬಗ್ಗೆ ನಾನು ಪರಿಶೀಲಿಸುತ್ತಿದ್ದೇನೆ. ಆದಷ್ಟು ಜಾಗ್ರತೆ ಅವರಿಗೆ ನ್ಯಾಯ ಒದಗಿಸುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅನೇಕ ಕಡೆ ಸೈಟ್‌ಗಳನ್ನು ಕೂಡ ತೆಗೆದುಕೊಳ್ಳುವ ಪ್ರಯತ್ನ ನಡೆಯುತ್ತಿದೆ. ನಾವು ಠೇವಣಿಯಾಗಿ ತೆಗೆದುಕೊಂಡಿರುವ ದುಡ್ಡು ಇವೆಲ್ಲಾ ಸೂಕ್ಷ್ಮವಾದಂಥದ್ದು ಪ್ರತಿಯೊಂದರ ಬಗ್ಗೆ ಪರಿಶೀಲಿಸಿ ಆದಷ್ಟು ಬೇಗ ಅವರಿಗೆ ಒಂದು ದಾರಿ ಕಾಣಿಸುತ್ತೇವೆ, ಪರಿಹಾರವನ್ನು ದೊರಕಿಸುತ್ತೇವೆಂದು ತಮ್ಮ ಮುಖಾಂತರ ಸನ್ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

11-10 ಎ. ಎಂ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಉತ್ತರದಲ್ಲಿ ಸ್ಪಷ್ಟತೆ ಇಲ್ಲ. ಹೊಸ ಬಡಾವಣೆಗಳನ್ನು ಮಾಡುವುದಕ್ಕೆ ಒಂದು ಅಂಗುಲ ಕೂಡ ಜಾಗವಿಲ್ಲ. ಆದರೆ ಇಂದು ಖಾಸಗೀ ಗೃಹ ನಿರ್ಮಾಣ ಮಂಡಳಿಯವರು

ಬೆಂಗಳೂರಿನ ಸುತ್ತಮುತ್ತ ನಿವೇಶನಗಳನ್ನು ಪಡೆದು ಮನೆಗಳನ್ನು ಕಟ್ಟುತ್ತಿದ್ದಾರೆ. ದುಬಾಯ್‌ನಿಂದ ಮತ್ತು ಬೇರೆ ಬೇರೆ ಕಡೆಯಿಂದ ಬಂದಂಥವರಿಗೆ ಉಪನಗರಗಳು ನಿರ್ಮಾಣ ಆಗುತ್ತಿದೆ. ಇಂದಿನ ದಿನದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಒಂದು ರೀತಿಯಲ್ಲಿ ಸಂಪೂರ್ಣ ವಾಗಿ ನಿಷ್ಕ್ರಿಯವಾಗಿದೆ ಎಂದರೆ ತಪ್ಪಾಗಲಾರದು. ಆದ್ದರಿಂದ ಇದರ ಬಗ್ಗೆ ಪ್ರಾಮಾಣಿಕ ವಾಗಿ ಚಿಂತನೆ ಮಾಡಿ ಸಚಿವರು ಉತ್ತರವನ್ನು ಈಗ ಇಲ್ಲಿ ಕೇಳಬೇಕಾಗಿದೆ.

ಶ್ರೀ ಅನಂತ್ ನಾಗ್ :- ಮಾನ್ಯ ಅಧ್ಯಕ್ಷರೇ, ನಾನು ಮತ್ತೊಮ್ಮೆ ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಉತ್ತರಿಸಲು ಇಚ್ಛಿಸುತ್ತೇನೆ. ನಿವೇಶನ ಹಂಚಿಕೆ ಬಗ್ಗೆ ಒಂದು ನಿಖರವಾದ ನಿಲುವನ್ನು ತೆಗೆದುಕೊಂಡು ಎಲ್ಲಿ ನಿವೇಶನವನ್ನು ಕೊಡುವುದಕ್ಕೆ ಸಾಧ್ಯವಿದೆಯೋ ಅಲ್ಲಿ ನಿವೇಶನಗಳನ್ನು ಕೊಡುತ್ತೇವೆ ಮತ್ತು ಎಲ್ಲಿ ನಿವೇಶನ ಕೊಡು ವುದಕ್ಕೆ ಆಗುವುದಿಲ್ಲವೊ ಅಲ್ಲಿ ಹಣವನ್ನು ವಾಪಸ್ಸು ಕೊಡಲು ಪರಿಶೀಲಿಸುತ್ತೇವೆ. ಆದರೆ ಎಷ್ಟೋ ಸಂದರ್ಭಗಳಲ್ಲಿ ಜನರೇ ಹಣವನ್ನು ವಾಪಸ್ಸು ತೆಗೆದುಕೊಂಡು ಹೋಗಿಲ್ಲ. ಇಂದಿನ ದಿನಗಳಲ್ಲಿ ಮಾರುಕಟ್ಟೆ ದರದಲ್ಲಿ ನಿವೇಶನವನ್ನು ಕೊಂಡು ಕೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಗರದ ಹೃದಯ ಭಾಗದಲ್ಲಿ ನಿವೇಶನಗಳು ದೊರೆಯದಿದ್ದರೂ ಪರವಾಗಿಲ್ಲ ಸ್ವಲ್ಪ ದೂರವಾದರೂ ಸರಿ ಜಮೀನುಗಳನ್ನು ತೆಗೆದು ಕೊಂಡು ನಿವೇಶನಗಳನ್ನು ಹಂಚಲು ಕ್ರಮ ತೆಗೆದುಕೊಳ್ಳಲು ಪ್ರಯತ್ನಿಸುತ್ತೇನೆ. ಮಾನ್ಯ ಸದಸ್ಯರು ಹೇಳಿದ ವಿಷಯಗಳನ್ನು ಗಂಭೀರವಾಗಿ ಪರಿಶೀಲಿಸಿ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇವೆಂದು ತಿಳಿಸಲು ಬಯಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೇ, 86,988 ಜನರುಗಳಿಂದ 34,11,46,000 ಹಣವನ್ನು ಠೇವಣಿಯನ್ನಾಗಿ ತೆಗೆದುಕೊಂಡು ಸುಮಾರು 10 ವರ್ಷ ಗಳೇ ಕಳೆದಿದೆ. ಬಿ.ಡಿ.ಎ.ದವರು ನಿವೇಶನ ಹಂಚಿಕೆ ಸಲುವಾಗಿ ಜಾಹಿರಾತನ್ನು ಕೊಡುವ ಮೊದಲೇ ನಿವೇಶನಗಳನ್ನು ಇಟ್ಟುಕೊಂಡಿರಬೇಕು. ಆದುದರಿಂದ ನಾನು ಮಾನ್ಯ ಸಚಿವರಲ್ಲಿ ಕೇಳುವದೇನೆಂದರೆ ಜಾಹಿರಾತು ಮಾಡುವ ಸಂದರ್ಭದಲ್ಲಿ ಒಟ್ಟು ಎಷ್ಟು ನಿವೇಶನಗಳು ಬಿ.ಡಿ.ಎ.ದಲ್ಲಿತ್ತು? ಇದುವರೆಗೆ ಎಷ್ಟು ನಿವೇಶನಗಳು ಹಂಚಿಕೆ ಆಗಿದೆ? ಎಷ್ಟು ಅಕ್ವಿಸಿಷನ್ ಪ್ರಪೋಸಲ್ ಎಷ್ಟು ಆಗಿದೆ? ಇದರ ಬಗ್ಗೆ ಸಚಿವರು ಉತ್ತರಿಸಬೇಕು.

ಶ್ರೀ ಅನಂತ್ ನಾಗ್ :- ಆ ವಿವರಗಳೆಲ್ಲಾ ಸಧ್ಯಕ್ಕೆ ನನ್ನ ಬಳಿ ಇಲ್ಲ. ಆದರೆ ಕೆಲವು ವಿವರಗಳು ಇವೆ.

ಅಧ್ಯಕ್ಷರು :- ಮಾನ್ಯ ಜಯಚಂದ್ರರವರು ಕೇಳಿರುವ ಪ್ರಶ್ನೆ ಮಹತ್ವದ್ದಾಗಿದೆ. ಆದುದರಿಂದ ಇದರ ಬಗ್ಗೆ ನೀವು ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ಮುಂದೆ ಉತ್ತರಿಸಿ. ಈ ಪ್ರಶ್ನೆಯನ್ನು ಮುಂದೆ ಬೇರೆ ರೂಪದಲ್ಲಿ ಬಂದಾಗ ತೆಗೆದುಕೊಳ್ಳೋಣ.

ಶ್ರೀ ಅನಂತ್ ನಾಗ್ :- ಜಾಹಿರಾತನ್ನು ಸದುದ್ದೇಶದಿಂದ ಕೊಡಲಾಗಿದೆ.

ಅಧ್ಯಕ್ಷರು :- ಆ ಸದುದ್ದೇಶದಲ್ಲೂ ಅಭಾವ ಇದೆ. ಬಿ.ಡಿ.ಎ.ದವರು ಜಾಹಿರಾತು ಕೊಟ್ಟು ಸಾರ್ವಜನಿಕರಿಂದ ನಿವೇಶನಗಳಿಗಾಗಿ ಹಣವನ್ನು ತೆಗೆದುಕೊಂಡ ಮೇಲೆ the number of sites available for distribution is not clear and if they collect money, ಈಗಾಗಲೇ ಮಾಟಾಳ್ ನಾಗರಾಜ್‌ರವರು ಏನು ಪದ ಉಪಯೋಗಿಸಿದ್ದಾರೆ; ನಾನು ಈಗ ಜಯಚಂದ್ರರವರು ಕೇಳಿರುವ ಉಪ ಪ್ರಶ್ನೆಗೆ ಅಭಿನಂದಿಸುತ್ತೇನೆ. ಆದರೆ ಸಧ್ಯದಲ್ಲಿ ಮಂತ್ರಿಗಳ ಹತ್ತಿರ ಅದಕ್ಕೆ ಉತ್ತರ ಇಲ್ಲ. ಸರ್ಕಾರದಿಂದ ಇದಕ್ಕೆ ಉತ್ತರವನ್ನು ನಾನು ಒದಗಿಸಿ ಕೊಡುತ್ತೇನೆ.

ಶ್ರೀ ಹೆಚ್. ಎನ್. ನಂಜೇಗೌಡ :- ಮಾನ್ಯ ಅಧ್ಯಕ್ಷರೇ, ಬಿ.ಡಿ.ಎ.ದ ವಾರ್ಷಿಕ ಎಸ್ಟಾಬ್ಲಿಷ್‌ಮೆಂಟ್ ಖರ್ಚು ಎಷ್ಟು? ಅಲ್ಲಿಯ ನೌಕರರುಗಳಿಗೆ ಸಂಬಳವನ್ನು ಯಾವ ರೀತಿಯಾಗಿ ಭರಿಸುತ್ತಿದ್ದಾರೆ? ಏಕೆಂದರೆ ಯಾರಾದರೂ ಬಿ.ಡಿ.ಎ. ಮೇಲೆ ಚೀಟಿಂಗ್ ಕೇಸ್ ಹಾಕಬಹುದು. ಸರ್ಕಾರದ ಮೇಲೆ ಚೀಟಿಂಗ್ ಆದುದರಿಂದ ಹೌಸಿಂಗ್ ಸೊಸೈಟಿಗಳವರು ಏನು ಜಮೀನುಗಳನ್ನು ಪಡೆದು ನಿವೇಶನಗಳನ್ನು ಹಂಚುತ್ತಾರೋ ಅದೇ ರೀತಿ ನೀವು ಅವರ ಜೊತೆ ಮಾತನಾಡಿ ಅವರಿಂದ ಜಮೀನುಗಳನ್ನು ಪಡೆದುಕೊಂಡು ನಿವೇಶನಗಳನ್ನಾಗಿ ಮಾಡಿಕೊಡಿ.

MR. SPEAKER :- Hon. Minister please discuss this with your leader. You are new to this subject. ದಯಮಾಡಿ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಂತ್ರಿಗಳು ಚರ್ಚೆ ಮಾಡಿ. ಇದಕ್ಕಾಗಿ ಸ್ವಲ್ಪ ಸಮಯವನ್ನು ವಿನಿಯೋಗಿಸಿ ಸಮಗ್ರವಾದ ಉತ್ತರವನ್ನು ತಂದುಕೊಡಿ.

ಶ್ರೀ ವೈ. ರಾಮಕೃಷ್ಣ :- ಇದು ಬಹಳ ಬಹಳ ಮಹತ್ವದ್ದಾಗಿರುವುದರಿಂದ ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಯಲ್ಲಿ ತೆಗೆದುಕೊಳ್ಳಿ.

MR. SPEAKER :- We will close this question.

ಶ್ರೀ ಹೆಚ್. ಎನ್. ನಂಜೇಗೌಡ :- ಮಾನ್ಯ ಅಧ್ಯಕ್ಷರೇ, ಹೌಸಿಂಗ್ ಸೊಸೈಟಿಯವರಿಂದ ನಿವೇಶನಗಳನ್ನು ಪಡೆದುಕೊಂಡು ಇವರಿಗೆ ನಿವೇಶನಗಳನ್ನು ಹಂಚುವಂಥ ವ್ಯವಸ್ಥೆಯನ್ನು ಮಾಡಿ.

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೇ, ಮಾನ್ಯ ನಂಜೇಗೌಡರು ಕೊಟ್ಟರುವಂಥ ಸಲಹೆಯನ್ನು ಪರಿಶೀಲನೆ ಮಾಡಿ ಅದರ ಮೇಲೆ ಚರ್ಚೆ ಆಗುವಾಗ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡುವಾಗ ಹೇಳುತ್ತಾರೆ.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಅಧ್ಯಕ್ಷರೇ, ಬಿ.ಡಿ.ಎ.ದವರು

ಈಗಾಗಲೇ ಹಂಚಿರುವ ಎಷ್ಟೋ ನಿವೇಶನಗಳಲ್ಲಿ ಮನೆ ಕಟ್ಟಲು ಆಗುತ್ತಿಲ್ಲ. ಇಲ್ಲಿ ಬೇರೆಯವರಿಂದ ಕಿರುಕುಳವಾಗುತ್ತಿದೆ. ನಂದಿನಿ ಲೇ ಔಟ್‌ನಲ್ಲಿ ಮಧ್ಯಮ ವರ್ಗದವರು ಬಿ.ಡಿ.ಎ.ದಿಂದ ನಿವೇಶನ ಪಡೆದಿದ್ದು ಮನೆ ಕಟ್ಟುವುದಕ್ಕೆ ಕೆಲವರಿಂದ ತೊಂದರೆ ಗಳಾಗುತ್ತಿವೆ. ಇಲ್ಲಿ ಮನೆ ಕಟ್ಟಲು ಪ್ರಾರಂಭಿಸಿದಾಗ ಬೇರೆ ಯಾರೋ ಬಂದು ಇದು ನಮ್ಮ ಭಾಗ ಎಂದು ಹೇಳುತ್ತಾರೆ. ಆದುದರಿಂದ ಬಿ.ಡಿ.ಎ.ದವರು ನಿವೇಶನ ಯಾರಿಗೆ ಹಂಚಿದ್ದಾರೋ ಅವರಿಗೆ ನಂದಿನಿ ಲೇ ಔಟ್‌ನಲ್ಲಿ ರಕ್ಷಣೆ ಕೊಟ್ಟು ಮನೆ ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಬೇಕು.

ಶ್ರೀ ಅನಂತ್ ನಾಗ್ :- ಮಾನ್ಯ ಅಧ್ಯಕ್ಷರೇ, ಎಲ್ಲಿ ಬಿ.ಡಿ.ಎ.ದಿಂದ ನಿವೇಶನವನ್ನು ಹಂಚಲಾಗಿದೆ ಆಲ್ಲಿ ನಿವೇಶನದಾರರಿಗೆ ತೊಂದರೆ ಆಗಿದ್ದರೆ ಅಂಥವರಿಗೆ ರಕ್ಷಣೆ ಕೊಟ್ಟು ಅವರಿಗೆ ಮನೆ ಕಟ್ಟಲು ಯಾವುದೇ ರೀತಿಯ ತೊಂದರೆಗಳು ಆಗದ ಹಾಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಮುನಿಯಪ್ಪ :- ಸರ್ಕಾರದಲ್ಲಿ ನಿವೇಶನ ಇಲ್ಲದೇ ಮತ್ತು ಯಾವುದೇ ಪ್ಲಾನ್ ಇಲ್ಲದೇ ಸಾರ್ವಜನಿಕರಿಂದ ಹಣವನ್ನು ನಿವೇಶನಗಳಿಗಾಗಿ ವಸೂಲು ಮಾಡಿದ್ದಾರೆ. ಕೆಲವರು ಬಿ.ಡಿ.ಎ.ದವರು ನಿವೇಶನಗಳನ್ನು ಅಲಾಟ್ ಮಾಡಿದ ರೂಪ ದಲ್ಲಿರುವಂಥ ಕಾಗದಗಳನ್ನು ತೆಗೆದುಕೊಂಡು ನೂರಾರು ನಿವೇಶನಗಳನ್ನು ಹೊರ ರಾಜ್ಯದಿಂದ ಬಂದಿರುವಂಥವರಿಗೆ ಮಾರಿ ಬಿಟ್ಟಿದ್ದಾರೆ. ಆದರೆ ಇಂಥ ನಿವೇಶನದಲ್ಲಿ ಮನೆ ಕಟ್ಟಲು ಹೋದರೆ ಆಗ ಬಿ.ಡಿ.ಎ.ದವರು ನಾವು ನಿವೇಶನವನ್ನು ಅಲಾಟ್ ಮಾಡಿಲ್ಲ ಎಂದು ಹೇಳುತ್ತಾರೆ.

ಶ್ರೀ ಅನಂತ್ ನಾಗ್ :- ಇಂಥ ಕೆಲವು ಇನ್‌ಸಿಡೆಂಟ್ಸ್ ನನ್ನ ಗಮನಕ್ಕೆ ಬಂದಿದೆ. ಇದರ ಬಗ್ಗೆ ವರದಿ ತರಿಸಿ ಉತ್ತರ ಕೊಡುತ್ತೇನೆ.

ಶ್ರೀ ಎನ್. ರಾಜಣ್ಣ :- ಮಾನ್ಯ ಅಧ್ಯಕ್ಷರೇ, ಹಿಂದೆ ರೆವಿನ್ಯೂ ಪ್ಯಾಕೇಟ್ಸ್‌ನಲ್ಲಿ ಈ ತರಹ ಮನೆಗಳನ್ನು ಕಟ್ಟುವಾಗ ಅವರು ಪ್ರೊಟೆಕ್ಷನ್ ಕೊಡುತ್ತಾರೆ, ಅವರೇ ಶಾಮೀಲಾಗಿ ಮಾಡುತ್ತಿರುತ್ತಾರೆ.

ಅಧ್ಯಕ್ಷರು :- ಯಾರು? ಹೇಗೆ ಕಟ್ಟಿಸುವುದು?

SRI N. RAJANNA :- It is an inner secret. There is a parallel BDA in Bangalore.

ಶ್ರೀ ಅನಂತ್ ನಾಗ್ :- ಪ್ಯಾರಲಲ್ ಬಿ.ಡಿ.ಎ. ಎಂದು ಇದ್ದರೆ ಅದನ್ನು ಮುಚ್ಚಿಸಬೇಕಾಗುತ್ತದೆ. ಪ್ಯಾರಲಲ್ ಬಿ.ಡಿ.ಎ.ಗೆ ಹಣ ಕೊಟ್ಟು ಬಿ.ಡಿ.ಎ.ಗೆ ಬಂದು ಸೈಟ್ ಕೊಡಿ ಅಂದರೆ ಹೇಗೆ ಕೊಡುವುದಕ್ಕಾಗುತ್ತದೆ?

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಪರ್ಯಾಯ ಅಭಿವೃದ್ಧಿ ಮಂಡಲಿ ಎಂದು ಏನು ರಚನೆ ಮಾಡಿದ್ದಾರೆ, ಅನೇಕ ಸೊಸೈಟಿಗಳನ್ನು ಮಾಡಿ ತಾವೇ ತಾವೇ ಸೈಟ್ ಹಂಚಿಬಿಟ್ಟು, ಇದರಲ್ಲಿ ಲೂಟಿ ನಡೆಯುತ್ತಿದೆ. ಜಿ.ವಿ.ಕೆ. ರಾವ್ ವರದಿ ಸ್ಪಷ್ಟವಾಗಿ ಹೇಳಿದ್ದಾರೆ. ನೆಲೆಗಳ್ಳರು ಎಂದು ಇದೇ ಸದನದಲ್ಲಿ ಪ್ರಸ್ತಾಪವಾಗಿತ್ತು. ನಾನು ಹೇಳುತ್ತೇನೆ, ಹೌಸಿಂಗ್ ಸೊಸೈಟಿ ಅವರ ಹತ್ತಿರ ಇವರು ಸೈಟನ್ನು ವ್ಯಾಪಾರ ಮಾಡಿ ಹಂಚುವುದಕ್ಕೆ ಹೋಗಬೇಡಿ. ಪ್ರಾಧಿಕಾರವೇ ನೀವು ಹಿಂದಕ್ಕೆ ಸೈಟ್‌ಗಳನ್ನು ತೆಗೆದು ಕೊಂಡು ಕೊಟ್ಟರೆ ಒಳ್ಳೆಯದು.

MR. SPEAKER :- Mr. Anant Nag, you please make use of the assistance of Mr. Roshan Baig. He will be very much useful to you in this regard as Home Minister. It is only that Department which can give solution to all you problems. We are citizens. There are 3 categories of animals, (1) Wild animals, 2) Pet animals and 3) Bad animals. Well, I put them under the first category. They are not useful to anybody. ಬಾಲಕೃಷ್ಣರವರೇ, ತಮ್ಮ ಪ್ರಶ್ನೆಗೆ ಸಮಯವನ್ನು ಕೇಳಿದ್ದಾರೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) :- ಮಾನ್ಯ ಅಧ್ಯಕ್ಷರೇ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 15 ನೇ ಪಟ್ಟಿಯಲ್ಲಿರುವ 61 ಪ್ರಶ್ನೆಗಳ ಪೈಕಿ 58 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ವಿಷಯ :- ಕೆ.ಎ.ಎಸ್., ಕೆ.ಪಿ.ಎಸ್. ಕೆ.ಎಫ್.ಎಸ್.ನವರಿಗೆ ಬಡ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 915 (1802)

ಶ್ರೀ ಅಯನೂರು ಮಂಜುನಾಥ (ಹೊಸನಗರ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಕೆಎಎಸ್, ಕೆಸಿಎಸ್, ಕೆಎಫ್ಎಸ್‌ನವರಿಗೆ ಬಡ್ತಿ ಸೇವೆಯ ಶೇಕಡ ಎಷ್ಟು ಪ್ರಮಾಣದಲ್ಲಿ ಐಎಎಸ್, ಐಪಿಎಸ್, ಐಎಫ್ಎಸ್ ನೀಡಲಾಗುತ್ತಿದೆ ; ಕಳೆದ 4 ವರ್ಷಗಳಲ್ಲಿ ರಾಜ್ಯದ ಶೇಕಡವಾರು ನಿಯಮದನ್ವಯ ಎಷ್ಟು ಜನರಿಗೆ ಬಡ್ತಿ ನೀಡಲಾಗಿದೆ (ವಿವರವಾದ ಪಟ್ಟಿ ನೀಡುವುದು)

ಆ) ಆಡಳಿತ ಭಾಷೆಯಾಗಿ ಕನ್ನಡವನ್ನು ಪರಿಣಾಮಕಾರಿಯಾಗಿ ಜಾರಿಯಾಗುವ ದಿಸೆಯಲ್ಲಿ ಕನ್ನಡಿಗ ಅಧಿಕಾರಿಗಳು ಉನ್ನತ ಸ್ಥಾನದಲ್ಲಿರುವುದು ಸಮಂಜಸವಲ್ಲವೆ?